ಸಲುವಾಗಿ, ಬಿಲ್ಲಿಂಗ್ ವ್ಯವಸ್ಥೆಯನ್ನು ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು. ವಿದ್ಯುತ್ ವಿತರಣಾ ಕಂಪನಿಗಳ ಹಲವಾರು ಉಪ–ವಿಭಾಗಗಳಲ್ಲಿ ಬಿಲ್ಲಿಂಗ್ ವ್ಯವಸ್ಥೆಯನ್ನು ಈಗಾಗಲೇ ಗಣಕೀಕರಣಗೊಳಿಸಲಾಗಿದೆ. ಇದನ್ನು ಇತರ ಉಪ–ವಿಭಾಗಗಳಿಗೆ ಹಂತ ಹಂತವಾಗಿ ವಿಸ್ತರಿಸಲಾಗುತ್ತದೆ.

ಅಧೀನ ಶಾಸನ ರಚನಾ ಸಮಿತಿಗೆ ಆದೇಶ, ಆದ್ಯಾದೇಶಗಳನ್ನು ತಡವಾಗಿ ಸಲ್ಲಿಸುತ್ತಿರುವುದರ ಬಗ್ಗೆ

4406 (5075) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಧೀನ ಶಾಸನ ರಚನಾ ಸಮಿತಿಗೆ ಸರ್ಕಾರಿ ಆದೇಶ, ನಿಯಮ ಮತ್ತು ಅಧ್ಯಾದೇಶಗಳನ್ನು ಪರಿಶೀಲನೆ ಸಲುವಾಗಿ ಬಹಳಷ್ಟು ತಡವಾಗಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೌದಾದರೆ, ಈ ರೀತಿ ತಡ ಆಗದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ತಡವಾಗಿ ಸಮಿತಿಯ ಮುಂದೆ ಮಂಡಿಸಲು ಕಾರಣರಾದ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ವಿವಿಧ ಅಧಿನಿಯಮಗಳಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆ ಮತ್ತು ಪ್ರತಿಯೊಂದು ನಿಯಮವನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ವಿವಿಧ ಅಧಿನಿಯಮಗಳಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿದೆ. ಈ ರೀತಿ ಹೊರಡಿಸಿದ ಅಧಿಸೂಚನೆ ಮತ್ತು ನಿಯಮಗಳನ್ನು ಆಯಾ ಇಲಾಖೆಗಳೇ ವಿಧಾನಮಂಡಲದ ಸಚಿವಾಲಯಕ್ಕೆ ಕಳುಹಿಸುತ್ತಿರುವುದರಿಂದ ಈ ಬಗ್ಗೆ ಆಗುತ್ತಿರುವ ವಿಳಂಬವು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಕಾರಣವಿಲ್ಲದೆ ವಿಳಂಬ ಮಾಡಿದ ಅಧಿಕಾರಿಗಳ ಬಗ್ಗೆ ಈ ಇಲಾಖೆಯಲ್ಲಿ ಮಾಹಿತಿ ಇರುವುದಿಲ್ಲ. ಯಾವುದೇ ವಿಳಂಬದ ಪ್ರಕರಣಗಳನ್ನು ವಿಧಾನಮಂಡಲದ ಸಚಿವಾಲಯವು ಈ ಇಲಾಖೆಯ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಸೂಚಿಸಲಾಗುವುದು.

ಚಾಮರಾಜನಗರ ತಾಲ್ಲೂಕಿನಲ್ಲಿ ನಾಗರೀಕ ಸೌಲಭ್ಯ ದೊರೆಯದಿರುವ ಬಗ್ಗೆ

4407 (5273) : ಶ್ರೀ ಗುರುಸ್ವಾಮಿ ಪಿ. (ಚಾಮರಾಜನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಮೂಡಲ ಮೋಳೆ, ಜಾಲಹಳ್ಳಿ ಹುಡಿ (ಕುರುಬರ ಬೀದಿ) ಗ್ರಾಮಗಳು ಸುಮಾರು 2 ಸಾವಿರ ಜನ ಸಂಖ್ಯೆ ಹೊಂದಿದ್ದು, ನಗರಸಭೆ ಅಥವಾ ಗ್ರಾಮ ಪಂಚಾಯ್ತಿ